Sri K. HANUMANTHAIYA.—You can take both.

Sri M. CHIKKALINGIAH.—How can it be both ? I want the point to be made clear. ಪಾಲಸಿ ಕಮಿಟಿಯವರು ಈ ಷೇಕ್‌ದಾರರುಗಳಿಗೇ ಬೇರೆಯಾಗಿ ಷೇಕ್‌ದಾರರ ಗ್ರೇಡ್ ಒಂದನ್ನು ಮಾಡಬೇಕೆಂದು ಹೇಳಲಿಲ್ಲವೇ ?

Sri K. HANUMANTHAIYA.—The real trouble is, the Policy Committee is after all advisory. Its decisions are not binding and no Committee appointed by the Government can claim the privilege of being a parallel Cabinet or a separate Cabinet.

Sri A. BHEEMAPPA NAIK.—Will the Government consider the desirability of absorbing all these retrenched persons in other services also ?

Sri K. HANUMANTHAIYA.—That is exactly the tenor of the Government Order.

Sri MULKA GOVINDA REDDY.—Is this the effect of the Committee presided over by the Chief Minister of Government ?

Sri K. HANUMANTHAIYA.—Even when the Chief Minister presides over the Committees he cannot overrule the Cabinet on that score.

Increased charges for supply of power for domestic consumption.

Q.—154. Sri A. MUNIAPPA (Sidlagatta-Chikballapur-Scheduled Castes).—

Will the Government be pleased to state :—

(*a*) whether it has come to their notice that increased charges are being levied for power supply for domestic consumption all over the State ;

(*b*) whether it has come to their notice that a sum of Rs. 2-4-0 is being levied even if a single light is put up ;

(*c*) the number of disconnections effected on account of the consequent default in paying the increased charges (districtwar details may be furnished) ;

(*d*) whether they intend to reconsider the above order relating to the increased charges and revive the old rates ?

A.—Sri K. HANUMANTHAIYA (Chief Minister).—

(*a*) Revised system abolishing the original flat rate system has been introduced in Rural Areas.

(*b*) Yes. A minimum of Rs. 1-11-0 per month for a load up to 180 Watts in the case of metered installations and a minimum of Rs. 2-4-0 per month in the case of unmetered installations are being levied.

(*c*)

District		*No. of installations (Flat rate) disconnected.*
Bangalore	...	319
Mysore	...	28
Mandya	...	100
Hassan	...	2
Chikmagalur	...	50
Chitaldrug	...	24
Shimoga	...	14
Tumkur	...	47
Kolar	...	154

(*d*) No.

ಶ್ರೀ ಎ. ಮುನಿಯಪ್ಪ.—ಸಂಸ್ಥಾನಾಮಳಿ ಒಂದೊಂದು ದೀಪಹಾಕಿರುವ ಮನೆಗಳ ಸಂಖ್ಯೆಯೆಷ್ಟು, ಎರಡೆರಡು ದೀಪಹಾಕಿರುವ ಮನೆಗಳ ಸಂಖ್ಯೆಯೆಷ್ಟು ಮತ್ತು ಮೂರು ಮೂರು ದೀಪಗಳನ್ನು ಹಾಕಿರುವ ಮನೆಗಳ ಸಂಖ್ಯೆಯೆಷ್ಟು ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್‌ಬೇಕು.

ಶ್ರೀ ಎ. ಮುನಿಯಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ದರಗಳನ್ನು ಜಾರಿಗೆ ತರಲಾಗುವುದು ಎಂದು ಹೇಳಿದ್ದೀರಿ. ಇದೇರೀತಿ ಟೌನು ಮತ್ತು ಸಿಟಿ ಪ್ರದೇಶಗಳಲ್ಲಿ ಹಾಕುವುದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಟೌನು ಮತ್ತು ಸಿಟಿಗಳಲ್ಲಿ ಯಾರೂ ಒಂದೊಂದೇ ದೀಪ ಹಾಕಿಕೊಳ್ಳುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಒಂದೇ ದೀಪ ಹಾಕಿಕೊಂಡ್ದರೂ ರೂ. 2-4-0 ರೂಪಾಯಿ ಕೊಡಬೇಕೆನ್ನುವುದು, 3 ರಿಂದ 5 ದೀಪಗಳವರೆಗೂ ಹಾಕಿಕೊಂಡಿದ್ದರೂ ರೂ.1-11-0 ಮಾತ್ರ ಕೊಡಬಹುದೆನ್ನುವುದು ಸರಿಯೇ?

ಶ್ರೀ ಕೆ. ಹನುಮಂತಯ್ಯ.—ತಾವು ಬರೀ ಒಂದು ಲೈಟು ಎನ್ನುವ ದೃಷ್ಟಿಯಿಂದ ನೋಡಬಾರದು. ಸರ್ಕಾರಕ್ಕೆ ಅಲ್ಲಿಗೆ ಲೈಟ್ ವ್ಯವಸ್ಥೆವಾಡಬೇಕಾದರೆ ಎಷ್ಟು ಕಂಬಹಾಕಬೇಕಾಯಿತು, ಎಷ್ಟು ವೈರ್ ಬೇಕಾಯಿತು ಎಂಬುದನ್ನು ನೋಡಬೇಕು. ಅವರು ಹಾಕಿರುವ ಖರ್ಚಿಗೆ ಅನುಸಾರವಾಗಿ ಉತ್ಪತ್ತಿಬರುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಹಾಗಿಲ್ಲದೆ ಒಂದು ದೀಪ ಹಾಕಿಕೊಂಡಿರುವವರೆಲ್ಲಾ ಬಡವರೆಂದು ಹೇಳಿಕೊಂಡು ವಿಧಿಸುತ್ತಾಹೋದರೆ ಇಲಾಖೆಯನ್ನು ನಡೆಸಿಕೊಂಡು ಹೋಗುವುದೇ ಕಷ್ಟವಾಗುತ್ತದೆ

ಶ್ರೀ ಎ. ಮುನಿಯಪ್ಪ.—ಈ ಸಂದರ್ಭದಲ್ಲೇನಾದರೂ ಸಬ್ ಕಮಿಟಿಯೊಂದನ್ನು ಮಾಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಇಲ್ಲ.

ಶ್ರೀ ಎ. ಮುನಿಯಪ್ಪ.—ಹಾಗಿದ್ದರೆ ಬಡವರ ಕಷ್ಟ ನುಖಗಳನ್ನು ತಮಗೆ ತಿಳಿಸುವುದಕ್ಕಾಗಿ ಒಂದು ಸಬ್ ಕಮಿಟಿಯನ್ನೇರ್ಪಡಿಸಿ ಈ ವಿಷಯವನ್ನು ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಯೋಚನೆಮಾಡೋಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವು ಬೆಂಗಳೂರು ಜಿಲ್ಲೆಯಲ್ಲಿ 319 ಲೈಟ್‌ಗಳು disconnect ಆಗಿವೆ ಯೆಂದು ಹೇಳಿದ್ದೀರಿ. ಈ ಲೈಟ್‌ಗಳೆಲ್ಲಾ ಬಹುಮಟ್ಟಿಗೆ flat rate ಹಿಂದೆ ವಿಧಿಸಿದ್ದಂಥ connections ಅಲ್ಲವೇ? ಬಹಳ ಹಿಂದಿನಿಂದ ಫ್ಲಾಟ್ ರೇಟುಗಳಿದ್ದು ಈಗ ದರ ಹೆಚ್ಚುಮಾಡಿದ್ದರಿಂದ ಹಣ ಕಟ್ಟುವುದಕ್ಕಾಗದೆ ಹೋಗಿದ್ದರಿಂದ ಈರೀತಿ disconnect ಆಗಿವೆ ಯಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಫ್ಲಾಟ್ ರೇಟನ್ನು ತಪ್ಪಿಸಿ ರೂ. 1-11-0 ಗೆ ಹೆಚ್ಚಿಸಿದ್ದು ಯಾವ ಲೆಕ್ಕಾಚಾರದಮೇಲೆ?

Mr. SPEAKER.—This was answered on Friday to Question No. 273 put by Sri Byre Gowda.

Absorption af Labourers in the Electrical Department.

Q.—312. Sri V. R. NAIDU (Malleswaram).—

Will the Government be pleased to state :—

(*a*) the number of labourers that are working in the Mysore Electrical Department;

(*b*) the number that are working as per muster rolls ;

(*c*) whether they will take steps to absorb those on the muster rolls permanently ?

A.—Sri K. HANUMANTHAIYA (Chief Minister).—

(*a*) About 7,878.

(*b*) About 4,000 (this number is included in the above figure).

(*c*) Persons of proved efficiency who fulfil prescribed conditions of age and skill are being absorbed against permanent vacancies as and when they arise.

ಶ್ರೀ ವಿ. ಆರ್. ನಾಯ್ಡು.—(a) ಪ್ರಶ್ನೆಗೆ ಉತ್ತರದಲ್ಲಿ ಸುಮಾರು 7,878 ಮಂದಿ ಕೆಲಸಗಾರರಿದ್ದಾರೆಂದು ಹೇಳಿದ್ದೀರಿ. ಈ ಸಂಖ್ಯೆಯಲ್ಲಿ ಅಧಿಕಾರಿಗಳೂ ಸೇರಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಎಲ್ಲರೂ ಸೇರಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಎರೆಕ್ಟ್ರಿಕ್ ಇಲಾಖೆ ಮೈಸೂರು ಸಂಸ್ಥಾನದಲ್ಲಿ ಸ್ಥಾಪನೆಯಾಗಿ ವಿದ್ಯುತ್ತನ್ನು ಒದಗಿಸಲು ಪ್ರಾರಂಭಮಾಡಿದ್ದು ಯಾವಾಗ?

(No answer.)

ಶ್ರೀ ವಿ. ಆರ್. ನಾಯ್ಡು.—ಮಸ್ಟರ್ ರೋಲ್ ಪಟ್ಟಿಯಲ್ಲಿ ಸುಮಾರು 4,000 ಮಂದಿ ಕೆಲಸಗಾರರು ಇದ್ದಾರೆಂದು ಹೇಳಿದ್ದೀರಿ. ಅವರುಗಳು ಕೆಲಸಕ್ಕೆ ಸೇರಿ ಎಷ್ಟು ವರ್ಷವಾಯಿತು?

ಶ್ರೀ ಕೆ. ಹನುಮಂತಯ್ಯ.—ಮಾನ್ಯ ಸದಸ್ಯರ ಮನಸ್ಸಿನಲ್ಲಿರುವುದಕ್ಕೆ ಉತ್ತರವನ್ನು (ಸಿ) ನಲ್ಲಿ ಹೇಳಿದೆ. 'Persons of proved efficiency who fulfil prescribed conditions of age and skill are being absorbed against permanent vacancies as and when they arise ' ಎಂದು ಹೇಳಿದ್ದೇವೆ. ಆ ರೀತಿಯಾಗಿ ಖಾಯಂ ಕೆಲಸ ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಇವರೆಲ್ಲರಿಗೂ ದಿನ ಕೂಲಿ ಸಂಬಳ ಕೊಡುತ್ತಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಕೆಲವರಿಗೆ ದಿನಕೂಲಿ, ಕೆಲವರಿಗೆ ಸಂಬಳ ಅನ್ವಯಿಸುತ್ತಿದೆ.

ಶ್ರೀ ವಿ. ಆರ್. ನಾಯ್ಡು.—ದಿನಕೂಲಿಯೆಂದರೆ ಸರ್ವೇಸಾಧಾರಣವಾಗಿ ಒಂದು ದಿವಸಕ್ಕೆ ಒಬ್ಬ ಕೂಲಿಗೆ ಎಷ್ಟು ಕೂಲಿ ಕೊಡುತ್ತೀರಿ?

ಶ್ರೀ ಕೆ. ಹನುಮಂತಯ್ಯ.—ಇಷ್ಟು ಉತ್ತರ ಹೇಳುತ್ತೇನೆ: ಮಾನ್ಯ ಸದಸ್ಯರು ಅಲ್ಲಿ ಬರತಕ್ಕ ಆದಾಯ ಎಷ್ಟು, ಕೂಲಿಯವರಿಗೆ ಎಷ್ಟು ಕೊಡಬಹುದು ಎಂಬುದನ್ನೂ ಪರಿಶೀಲನೆಮಾಡಬೇಕು.

ಶ್ರೀ ವಿ. ಆರ್. ನಾಯ್ಡು.—ಸುಮಾರು 6-7 ವರ್ಷಗಳಿಂದಲೂ ಕೆಲಸಮಾಡುತ್ತಿದ್ದರೂ confirm ಆಗದೆ ಈ ಕೂಲಿಗಳು ಕೆಲಸಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಉತ್ತರದಲ್ಲಿ ಹೇಳಿದೆ.

ಶ್ರೀ ವಿ. ಆರ್. ನಾಯ್ಡು.—15 ವರ್ಷಗಳಾದರೂ confirm ಮಾಡದೆ ಇದ್ದರೆ ಅವರ ಗತಿಯೇನು?

(No answer.)

Amounts provided for construction and repairs of University Buildings.

Q.—75. Sri G. SIVAPPA (Holalkere).—

Will the Government be pleased to state :—

(*a*) the amount provided for the construction and repairs each year of the University Buildings in the University budget since 1949-50 to 1952-53;

(*b*) the amount spent under this head each year since 1949-50 to 1952-53?

A.—Sri A. G. RAMACHANDRA RAO (Minister for Law and Education).—

		Rs.	a.	p:
(*a*)	1949-50	5,50,000	0	0
	1950-51	4,00,000	0	0
	1951-52	4,00,000	0	0
	1952-53	4,50,000	0	0
(*b*)	1949-50	3,89,066	0	0
	1950-51	4,73,888	0	0
	1951-52	3,18,098	0	0
	1952-53	3,83,497	10	0